ಶನಿವಾರ 02.05.2026 ಬೆಂಗಳೂರು ಬೆಲೆ: 5ರೂ 2 ಪುಟಗಳು ಸಂಪುಟ 01 ಸಂಚಿಕೆ 179 Saturday Bangalore Price: 5/- Rs 2 Pages Volume 01 Issue 179

PRGI/RNI: KNKAN/25/A1348

ಕನ್ನಡ ದಿನಪತ್ರಿಕೆ

ಡಿಜಿಟಲ್ ವಾರ್ತೆ

ಕನ್ನಡಿಗರ ಶಕ್ತಿ

DIGITAL VARTHE

digitalvarthe@gmail.com
www.digitalvarthe.com
epaper.digitalvarthe.com
Mob: 9538786812
Office: 9480847498

ಅಭಿಷೇಕ್ ಜಿಕ್ಕಮಾರನಹಳ್ಳಿ
ಸಾರಥ್ಯದಲ್ಲಿ

ಗ್ರಾಮೀಣ ಕುಡಿಯುವ ನೀರು ಯೋಜನೆಗಳ ಪ್ರಗತಿ ಕುರಿತು ಮಹತ್ವದ ಚರ್ಚೆ

ಪ್ರತಿ ನಾಗರಿಕನಿಗೂ ಸುರಕ್ಷಿತ, ಶುದ್ಧ ಹಾಗೂ ಸುಸ್ಥಿರ ಕುಡಿಯುವ ನೀರನ್ನು ಒದಗಿಸುವುದು ಕೇವಲ ಒಂದು ಯೋಜನೆಯ ಗುರಿಯಲ್ಲ – ಇದು ಮಾನವ ಹಕ್ಕಿನ ಅಂಶವಾಗಿದೆ. ಈ ಮಹತ್ವದ ದೃಷ್ಟಿಕೋನದೊಂದಿಗೆ ನಾವು ಕೆಲಸ ಮಾಡುತ್ತಿರುವ ಈ ಸಂದರ್ಭದಲ್ಲಿ, ಇಂದು ಇಲ್ಲಿ ಉಪಸ್ಥಿತರಿರುವ ಎಲ್ಲಾ ಗಣ್ಯರು, ಜನಪ್ರತಿನಿಧಿಗಳು, ಅಧಿಕಾರಿಗಳು, ತಜ್ಞರು ಮತ್ತು ಭಾಗವಹಿಸಿರುವ ಎಲ್ಲರಿಗೂ ನಾನು ಹೃತ್ಪೂರ್ವಕವಾಗಿ ಸ್ವಾಗತ ಕೋರುತ್ತೇನೆ. ನಿಮ್ಮೆಲ್ಲರ ಸಹಕಾರ, ಸಲಹೆ ಮತ್ತು ಭಾಗವಹಿಸುವಿಕೆ ಇಲ್ಲದೆ ಈ ಮಹತ್ತರ ಗುರಿ ಸಾಧಿಸುವುದು ಸಾಧ್ಯವಿಲ್ಲ.

ಕರ್ನಾಟಕವು ದೇಶದಲ್ಲಿಯೇ ಎರಡನೇ ಅತ್ಯಂತ ಹೆಚ್ಚಿನ ಒಣಭೂಮಿಯನ್ನು ಹೊಂದಿರುವ ರಾಜ್ಯವಾಗಿರುವುದರಿಂದ, ನೀರಿನ ಲಭ್ಯತೆ ಎಂಬುದು ನಮ್ಮ ರಾಜ್ಯದ ಪ್ರಮುಖ ಸವಾಲಾಗಿದೆ. ಅನೇಕ ಭಾಗಗಳಲ್ಲಿ ಜನರು ಕುಡಿಯುವ ನೀರಿಗಾಗಿ ಪ್ರತಿದಿನವೂ ಸಂಕಷ್ಟ ಅನುಭವಿಸುತ್ತಿದ್ದಾರೆ. ಇದಕ್ಕು ಜೊತೆಗೆ, ಆರ್ಸೆನಿಕ್ ಮತ್ತು ಫ್ಲೋರೈಡ್ ಮಿಶ್ರಿತ ನೀರಿನ ಸಮಸ್ಯೆ ಹಲವು ಜಿಲ್ಲೆಗಳಲ್ಲಿ ಕಂಡುಬರುತ್ತಿದ್ದು, ಇದು ಜನರ ಆರೋಗ್ಯದ ಮೇಲೆ ದೀರ್ಘಕಾಲಿಕ ಪರಿಣಾಮ ಬೀರುತ್ತಿದೆ. ಈ ಸವಾಲುಗಳನ್ನು ಮನಗಂಡು, ಪ್ರತಿಯೊಂದು ಗ್ರಾಮೀಣ ಕುಟುಂಬಕ್ಕೂ ಶುದ್ಧ ಹಾಗೂ ಆರೋಗ್ಯಕರ ಕುಡಿಯುವ ನೀರನ್ನು ತಲುಪಿಸುವ ಉದ್ದೇಶದಿಂದ, ಜಲಮೂಲಗಳ ಸಂರಕ್ಷಣೆ, ಪುನರುಜ್ಜೀವನ ಹಾಗೂ ಬೃಹತ್ ಮಟ್ಟದ ನೀರು ಸರಬರಾಜು ವ್ಯವಸ್ಥೆಗಳ ಅಭಿವೃದ್ಧಿಗೆ ನಾವು ಆದ್ಯತೆ ನೀಡಿದ್ದೇವೆ. ನೀರು ಕೇವಲ ಮೂಲಸೌಕರ್ಯವಲ್ಲ – ಅದು ಜೀವನದ ಮೂಲಾಧಾರ ಎಂಬ ಅರಿವಿನಿಂದ ನಾವು ಈ ಕಾರ್ಯವನ್ನು ಕೈಗೊಂಡಿದ್ದೇವೆ.

ನೀರಿನ ಯೋಜನೆಗಳ ಅನುಷ್ಠಾನದಲ್ಲಿ ಗುಣಮಟ್ಟವೇ ನಮ್ಮ ಮೊದಲ ಆದ್ಯತೆಯಾಗಿದೆ. ಯಾವುದೇ ರೀತಿಯ ರಾಜಿ ಇಲ್ಲದೆ, ಪ್ರತಿಯೊಂದು ಕಾಮಗಾರಿಯನ್ನೂ ಉನ್ನತ ಮಟ್ಟದ ಮಾನದಂಡಗಳಿಗೆ ಅನುಗುಣವಾಗಿ ನಿರ್ವಹಿಸಲಾಗುತ್ತಿದೆ. ಈ ಯೋಜನೆಯಡಿ ಕೈಗೊಳ್ಳಲಾಗುವ ಎಲ್ಲಾ ಕಾಮಗಾರಿಗಳನ್ನು ಮೂರನೇ ಪಕ್ಷದ ಸ್ವತಂತ್ರ ಏಜೆನ್ಸಿಗಳ ಮೂಲಕ ಪರಿಶೀಲನೆ ನಡೆಸಲಾಗುತ್ತಿದ್ದು, ಇದು ಪಾರದರ್ಶಕತೆ, ನಂಬಿಕೆ ಹಾಗೂ ಜವಾಬ್ದಾರಿತ್ವವನ್ನು ಖಚಿತಪಡಿಸುತ್ತದೆ. ಸರ್ಕಾರದ ಕೆಲಸ ಜನರ ನಂಬಿಕೆಯನ್ನು ಗೆಲ್ಲಬೇಕಾದ್ದರಿಂದ, ಪ್ರತಿಯೊಂದು ಹಂತದಲ್ಲೂ ನಿಖರತೆ ಮತ್ತು ಗುಣಮಟ್ಟವನ್ನು ನಾವು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದೇವೆ.

ಇದುವರೆಗೆ ನಾವು ಸಾಧಿಸಿರುವ ಪ್ರಗತಿ ಗಮನಾರ್ಹವಾಗಿದೆ. 101.31 ಲಕ್ಷ ಗ್ರಾಮೀಣ ಕುಟುಂಬಗಳ ಪೈಕಿ ಸುಮಾರು 88.06 ಲಕ್ಷ ಮನೆಗಳಿಗೆ ನಳಸಂಪರ್ಕ ಒದಗಿಸಲಾಗಿದೆ, ಇದು ಶೇ.86.93 ರಷ್ಟು ಸಾಧನೆ. ಈ ಅಂಕಿಅಂಶಗಳು ಕೇವಲ ಸಂಖ್ಯೆಗಳಲ್ಲ – ಇವು ಸಾವಿರಾರು ಕುಟುಂಬಗಳ ಜೀವನದಲ್ಲಿ ಬಂದಿರುವ ಬದಲಾವಣೆಯ ಪ್ರತಿಬಿಂಬವಾಗಿದೆ. ಒಟ್ಟು 66,344 ಕಾಮಗಾರಿಗಳ ಪೈಕಿ 48,789 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದು, ಇದರಲ್ಲಿ 28,809 ಕಾಮಗಾರಿಗಳು ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ 19,980 ಕಾಮಗಾರಿಗಳು ಶಾಲೆಗಳು ಮತ್ತು ಅಂಗನವಾಡಿಗಳಲ್ಲಿ ಕೈಗೊಳ್ಳಲಾಗಿದೆ. ಮಕ್ಕಳ ಆರೋಗ್ಯ, ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಈ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಕೇಂದ್ರ ಸರ್ಕಾರದಿಂದ ನಿರೀಕ್ಷಿತ ಸಹಕಾರ ಸಿಗದಿದ್ದರೂ, ರಾಜ್ಯ ಸರ್ಕಾರ ತನ್ನ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳದೆ ಮುಂದುವರೆದಿದೆ. ಕಳೆದ ಎರಡು ವರ್ಷಗಳಲ್ಲಿ ಒಟ್ಟು ರೂ.17,554.63 ಕೋಟಿ ಹೂಡಿಕೆ ಮಾಡಲಾಗಿದೆ. ಇದರಲ್ಲಿ ರೂ.8,880.71 ಕೋಟಿ ಕೇಂದ್ರದ ಪಾಲಿನ ನಿರೀಕ್ಷೆಯಲ್ಲಿ ಮುಂಗಡವಾಗಿ ಹೂಡಲಾಗಿದೆ. ಈ ಕ್ರಮವು ರಾಜ್ಯ ಸರ್ಕಾರದ ಬದ್ಧತೆಯನ್ನು ಸ್ಪಷ್ಟಪಡಿಸುತ್ತದೆ. ದೇಶದ ಅಭಿವೃದ್ಧಿಗೆ ಕೈಜೋಡಿಸುವಲ್ಲಿ ಕರ್ನಾಟಕ ಸದಾ ಮುಂಚೂಣಿಯಲ್ಲಿದ್ದರೂ, ಕೇಂದ್ರದಿಂದ ಅನುದಾನ ಬಿಡುಗಡೆ ವಿಳಂಬವಾಗಿರುವುದು ವಿಷಾದನೀಯ ಸಂಗತಿ.

ಕೇಂದ್ರ ಸರ್ಕಾರವು ಆಯವ್ಯಯದಲ್ಲಿ ಅನುದಾನವನ್ನು ಹಂಚಿಕೆ ಮಾಡಿದ್ದರೂ, ಅದನ್ನು ಸಮಯಕ್ಕೆ ಸರಿಯಾಗಿ ಬಿಡುಗಡೆ ಮಾಡದಿರುವುದು ಯೋಜನೆಗಳ ವೇಗಕ್ಕೆ ಅಡ್ಡಿಯಾಗುತ್ತಿದೆ. ಆದರೂ, ಜನರ ಹಿತದೃಷ್ಟಿಯಿಂದ ರಾಜ್ಯ ಸರ್ಕಾರ ಕೇಂದ್ರದ ಪಾಲಿನ ಹಣವನ್ನೂ ಭರಿಸಿ ಯೋಜನೆಗಳು ನಿಲ್ಲದಂತೆ ನೋಡಿಕೊಂಡಿದೆ. ಇದು ಆಡಳಿತದ ದೃಢಸಂಕಲ್ಪ ಮತ್ತು ಜನಪರ ಬದ್ಧತೆಯ ಸ್ಪಷ್ಟ ಉದಾಹರಣೆಯಾಗಿದೆ.

ಸುದೀರ್ಘ ಕಾಲದ ಪರಿಣಾಮಕಾರಿ ವ್ಯವಸ್ಥೆ ನಿರ್ಮಾಣಕ್ಕಾಗಿ ನಾವು ಸಾಂಸ್ಥಿಕ ಮತ್ತು ನಿರ್ವಹಣಾ ವ್ಯವಸ್ಥೆಗಳನ್ನು ಬಲಪಡಿಸಿದ್ದೇವೆ. ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ನೀತಿಯನ್ನು ಅನುಷ್ಠಾನಗೊಳಿಸಿರುವ ರಾಜ್ಯಗಳಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಲಿಂಗ ಸಮತೋಲನ ಹೊಂದಿರುವ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಮಿತಿಗಳನ್ನು ಸಕ್ರಿಯವಾಗಿ ತೊಡಗಿಸುವ ಮೂಲಕ, ಸ್ಥಳೀಯ ಮಟ್ಟದಲ್ಲಿ ನಿರ್ವಹಣಾ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ. ಪಿಎಂಯು ವ್ಯವಸ್ಥೆ ಸ್ಥಾಪನೆಯ ಮೂಲಕ ಯೋಜನೆಗಳ ಕಾರ್ಯಕ್ಷಮತೆ ಮತ್ತು ಮೇಲ್ವಿಚಾರಣೆಯನ್ನು ಮತ್ತಷ್ಟು ಬಲಪಡಿಸಲಾಗಿದೆ. ಜೀವ ಜಲ ಅಪ್ಲಿಕೇಶನ್, ಜಿಐಎಸ್ ಆಧಾರಿತ ಆಸ್ತಿ ನಿರ್ವಹಣೆ ಮತ್ತು ನೈಜ ಸಮಯದ ಮೇಲ್ವಿಚಾರಣೆ ಮುಂತಾದ ಡಿಜಿಟಲ್ ಉಪಕ್ರಮಗಳು ಆಡಳಿತವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ರೂಪಿಸುತ್ತಿವೆ. 1.51 ಲಕ್ಷಕ್ಕೂ ಹೆಚ್ಚು ಮಹಿಳೆಯರಿಗೆ ನೀರಿನ ಗುಣಮಟ್ಟ ಪರೀಕ್ಷೆಯ ತರಬೇತಿ ನೀಡಿರುವುದು, ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ಮಹತ್ವದ ಹೆಜ್ಜೆಯಾಗಿದೆ.

ಗುಣಮಟ್ಟದ ಖಾತ್ರಿಗಾಗಿ ಬ್ಯೂರೋ ವೆರಿಟಾಸ್ ಸಂಸ್ಥೆಯನ್ನು ನೇಮಿಸಿರುವುದು ನಮ್ಮ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿದೆ. ಸ್ವತಂತ್ರ ಪರಿಶೀಲನೆ, ಮಾದರಿ ಆಧಾರಿತ ತಪಾಸಣೆ, ದಾಖಲೆಗಳ ಪರಿಶೀಲನೆ ಹಾಗೂ ತಾಂತ್ರಿಕ ಪರೀಕ್ಷೆಗಳ ಮೂಲಕ ಕಾಮಗಾರಿಗಳ ಗುಣಮಟ್ಟವನ್ನು ನಿರಂತರವಾಗಿ ಪರಿಶೀಲಿಸಲಾಗುತ್ತಿದೆ. ಇದರಿಂದ ಯೋಜನೆಗಳ ದೀರ್ಘಕಾಲಿಕ ಸ್ಥಿರತೆ ಮತ್ತು ಪರಿಣಾಮಕಾರಿತ್ವ ಖಚಿತವಾಗುತ್ತಿದೆ.

ನೀರಿನ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸುವ ಕಾರ್ಯ ಪ್ರಗತಿಯಲ್ಲಿದ್ದು, ಇದು ಜ್ಞಾನ, ತರಬೇತಿ ಮತ್ತು ಮಾರ್ಗದರ್ಶನ ಕೇಂದ್ರವಾಗಿ ಚಿಂತರಬರಾಜು ಸಾಧಿಸಿರುವುದು ಈ ಯೋಜನೆಯ ಯಶಸ್ಸಿನ ಸ್ಪಷ್ಟ ಉದಾಹರಣೆಯಾಗಿದೆ. ಇದು ಕೇವಲ ಮೂಲಸೌಕರ್ಯವಲ್ಲ – ಇದು ಜನರ ಜೀವನಮಟ್ಟವನ್ನು ಸುಧಾರಿಸುವ ಪರಿವರ್ತನಾ ಶಕ್ತಿ ಹೊಂದಿದೆ.

ನಿಗದಿತ ಕಾಲಮಿತಿಯೊಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ಕರ್ನಾಟಕ ಸರ್ಕಾರ ಸಂಪೂರ್ಣ ಬದ್ಧವಾಗಿದೆ. ಮುಂಗಡ ವೆಚ್ಚಗಳ ಮರುಪಾವತಿ ಸೇರಿದಂತೆ ಬಾಕಿ ಇರುವ ಎಲ್ಲಾ ಅನುದಾನವನ್ನು ತಕ್ಷಣ ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರವನ್ನು ನಾವು ಆಗ್ರಹಿಸುತ್ತೇವೆ. ಇದರಿಂದ ಯೋಜನೆಗಳ ನಿರಂತರತೆ, ವೇಗ ಮತ್ತು ಪರಿಣಾಮಕಾರಿತ್ವವನ್ನು ಖಚಿತಪಡಿಸಬಹುದು. ಅಂತಿಮವಾಗಿ, ದೇಶದ ಪ್ರತಿಯೊಬ್ಬ ಗ್ರಾಮೀಣ ನಾಗರಿಕನಿಗೂ ಸುರಕ್ಷಿತ, ವೇಗವಾದ ಮತ್ತು ಸುಸ್ಥಿರ ಕುಡಿಯುವ ನೀರನ್ನು ಒದಗಿಸುವ ರಾಷ್ಟ್ರೀಯ ದೃಷ್ಟಿಕೋನವನ್ನು ನಾವು ಒಟ್ಟಾಗಿ ಸಾಧಿಸಬೇಕಾಗಿದೆ.

ಕಿಡಿಗೇಡಿಗಳ ದುಷ್ಕೃತ್ಯ..! ಕಟಾವಿಗೆ ಬಂದಿದ್ದ ಕಬ್ಬು ಬೆಳೆಗೆ ಬೆಂಕಿ. ಸಂಪೂರ್ಣ ಕಬ್ಬಿನ ಬೆಳೆ ನಾಶ..! ರೈತ ಹೈರಾಣು...!

ತಾಂಡವಪುರ : ಕಟಾವಿಗೆ ಸಿದ್ಧವಾಗಿದ್ದ ಕಬ್ಬು ಬೆಳೆಗೆ ಕಿಡಿಗೇಡಿಗಳು ಬೆಂಕಿ ಹಚ್ಚಿ ಆಟ್ಟಹಾಸ ಮೆರೆದ ಘಟನೆ ಇಂದ ರೈತನ ಕಬ್ಬಿನ ಬೆಳೆ ಸಂಪೂರ್ಣವಾಗಿ ಬೆಂಕಿಗೆ ಆವತಿಯಾಗಿ ಸಂಪೂರ್ಣವಾಗಿ ನಾಸವಾಗಿರುವ ಘಟನೆ

ನಂಜನಗೂಡು ವಿಧಾನಸಭಾ ಕ್ಷೇತ್ರಕ್ಕೆ ಸೇರುವ ತಾಲೂಕಿನ ಬದನವಾಳು ಗ್ರಾಮದಲ್ಲಿ ನಡೆದಿದೆ. ಸಾಲ ಸೋಲ ಮಾಡಿ ಮನೆಯಲ್ಲಿದ್ದ ಚಿನ್ನಾಭರಣಗಳನ್ನು ಅಡವಿಟ್ಟು 5 ಎಕ್ರೆಯಲ್ಲಿ ಬೆಳೆದಿದ್ದ ಕಬ್ಬು ಸಂಪೂರ್ಣ ಸುಟ್ಟು ಭಸ್ಮವಾಗಿದೆ.

ಬದನವಾಳು ಮತ್ತು ದೇವನೂರು ಗ್ರಾಮದ ಮಧ್ಯ ಭಾಗದಲ್ಲಿರುವ ಕೃಷಿ ಜಮೀನಿನಲ್ಲಿ ಬೆಳೆಯಲಾಗಿದ್ದ ಕಬ್ಬುಬೆಳೆ ನಾಶವಾಗಿದೆ. ರೈತ ವಿಜಯೇಂದ್ರ ಪ್ರಭುಸ್ವಾಮಿ ಎಂಬುವರ ಕಬ್ಬು ಬೆಳೆ ಇದಾಗಿದೆ.

ಸರ್ವೆ ನಂಬರ್ 202/1,202/2, ರಲ್ಲಿ ಸರಿ ಸುಮಾರು 5 ಎಕರೆ ಕಬ್ಬು ಬೆಳೆ ಮಾಡಿದ್ದ ರೈತ ವಿಜೇಂದ್ರ ಹಾಗೂ ಪ್ರಭುಸ್ವಾಮಿ. 11 ತಿಂಗಳು ಕಳೆದಿದ್ದು ಇನ್ನು ಒಂದು ತಿಂಗಳ ಒಳಗಾಗಿ ಕಟಾವು ಮಾಡಬೇಕಿತ್ತು.

ಯಾರು ಇಲ್ಲದ ಸಮಯ ನೋಡಿ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ. ಸುಮಾರು 15 ಲಕ್ಷಕ್ಕೂ ಅಧಿಕ ಹಣ ನಷ್ಟವಾಗಿದೆ ಎಂದು ಆರೋಪಿಸಿದ್ದಾರೆ.ಬದುಕು ಕಟ್ಟಿಕೊಳ್ಳುವ ಸಂದರ್ಭದಲ್ಲಿ ಈ ರೀತಿಯ ಕೃತ್ಯ ಮಾಡಿದ್ದಾರೆ ಎಂದು ರೈತ ವಿಜೇಂದ್ರ ಪ್ರಭುಸ್ವಾಮಿ ಅಳಲು ತೋಡಿಕೊಂಡಿದ್ದಾರೆ.ರಾಜ್ಯ ಸರ್ಕಾರದಿಂದ ತಹಸಿಲ್ದಾರ್ ನೇತೃತ್ವದಲ್ಲಿ ಪರಿಶೀಲಿಸಿ ಪರಿಹಾರ ಕಲ್ಪಿಸಿಕೊಡಬೇಕು.

ಕಿಡಿಗೇಡಿಗಳನ್ನು ಬಂಧಿಸಿ ಕಾನೂನು ಬದ್ಧವಾಗಿ ತಕ್ಕ ಶಿಕ್ಷೆ ನೀಡಬೇಕು ಎಂದು ನಷ್ಟಕ್ಕೊಳಗಾದ ರೈತ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ ಮಾಡುವ ಮೂಲಕ ಆಗ್ರಹಿಸಿದ್ದಾರೆ...

ಮಂಡ್ಯ ಜಿಲ್ಲೆಯಲ್ಲಿ 1,354 ಬಾಲಗರ್ಭಿಣಿಯರು ಪತ್ತೆ: ಲೋಕಾಯುಕ್ತ ತನಿಖೆಯಲ್ಲಿ ಸ್ಫೋಟಕ ಮಾಹಿತಿ ಬಯಲು!

ಮಂಡ್ಯ: ಜಿಲ್ಲೆಯಲ್ಲಿ ಬಾಲಗರ್ಭಿಣಿಯರ ಸಂಖ್ಯೆ ದಿನೇ ದಿನೇ ಏರಿಕೆಯಾಗುತ್ತಿರುವುದು ಸಾರ್ವಜನಿಕರನ್ನು ಬೆಚ್ಚಿಬೀಳಿಸಿದೆ. ಆರೋಗ್ಯ ಇಲಾಖೆಯ ಆರ್‌ಸಿಎಚ್ (RCH) ಪೋರ್ಟಲ್ ನೀಡಿರುವ ಅಂಕಿಅಂಶಗಳ ಪ್ರಕಾರ, ಕಳೆದ ಐದು ವರ್ಷಗಳಲ್ಲಿ ಜಿಲ್ಲೆಯಲ್ಲಿ ಬರೋಬ್ಬರಿ 1,354 ಬಾಲಗರ್ಭಿಣಿ ಪ್ರಕರಣಗಳು ವರದಿಯಾಗಿವೆ. ಇದು ಜಿಲ್ಲೆಯ ಸಾಮಾಜಿಕ ಆರೋಗ್ಯದ ಮೇಲೆ ಗಂಭೀರ ಪ್ರಶ್ನೆಗಳನ್ನು ಎತ್ತಿದೆ.

ಅನೇಕ ಪೋಕ್ಸೋ ಪ್ರಕರಣಗಳಲ್ಲಿ ದಾಖಲಾಗಿಲ್ಲ ಕೇಸ್!:ವರದಿಯಾಗಿರುವ 1,354 ಪ್ರಕರಣಗಳ ಪೈಕಿ ಪೋಕ್ಸೋ (ಕಿಜಿಅಖಿಡಿ) ಕೇಸ್‌ಗಳ ಸಂಖ್ಯೆ ಕೇವಲ ಕೇವಲ 674. ಅಂದರೆ ಅರ್ಧಕ್ಕಿಂತ ಹೆಚ್ಚು ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಾಗಿಲ್ಲ ಎಂಬ ಕಹಿ ಸತ್ಯ ಬಯಲಾಗಿದೆ. ಬಾಲ್ಯ ವಿವಾಹ, ಪ್ರೀತಿಯ ಜಾಲ, ಮತ್ತು ಲೈಂಗಿಕ ದೌರ್ಜನ್ಯದಂತಹ ಕಾರಣಗಳಿಂದಾಗಿ 14 ರಿಂದ 18 ವರ್ಷದೊಳಗಿನ ಬಾಲಕಿಯರು ಗರ್ಭಿಣಿಯರಾಗುತ್ತಿರುವುದು ಆತಂಕಕ್ಕೆ ಕಾರಣವಾಗಿದೆ.

ಲೋಕಾಯುಕ್ತ ದಾಳಿ ವೇಳೆ ಬಯಲಾಯ್ತು ಸ್ಕ್ಯಾನಿಂಗ್ ದಂಧೆ: ಇತ್ತೀಚೆಗೆ ಕೆಆರ್ ಪೇಟೆಯ ಎರಡು ಖಾಸಗಿ ಡಯಾಗ್ನೋಸ್ಟಿಕ್ ಸೆಂಟರ್‌ಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದಾಗ ಮತ್ತಷ್ಟು ಆಘಾತಕಾರಿ ವಿಷಯಗಳು ಹೊರಬಂದಿವೆ. ಈ ಕೇಂದ್ರಗಳಲ್ಲಿ ನಿಯಮ ಬಾಹಿರವಾಗಿ 31 ಬಾಲಗರ್ಭಿಣಿಯರಿಗೆ ಸ್ಕ್ಯಾನಿಂಗ್ ನಡೆಸಿರುವುದು ತನಿಖೆ ವೇಳೆ ಪತ್ತೆಯಾಗಿದೆ. ಈ ಮೂಲಕ ಜಿಲ್ಲೆಯಲ್ಲಿ ನಡೆಯುತ್ತಿರುವ ಅಕ್ರಮ ಸ್ಕ್ಯಾನಿಂಗ್ ದಂಧೆಯ ಜಾಲ ಎಷ್ಟು ಆಳವಾಗಿ ಹರಡಿದೆ ಎಂಬುದು ಸಾಬೀತಾಗಿದೆ.

ಈ ಹಿಂದೆ ಹೆಣ್ಣು ಭ್ರೂಣ ಪತ್ತೆ ಹಾಗೂ ಹತ್ಯೆ ಪ್ರಕರಣದಲ್ಲಿ ಮಂಡ್ಯ ಜಿಲ್ಲೆ ಕರ್ನಾಟಕವನ್ನೇ ಬೆಚ್ಚಿಬೀಳಿಸಿತ್ತು. ಮಂಡ್ಯದ ಆಲೆಮನೆ, ಹೆಲ್ತ್ ಕ್ವಾರ್ಟರ್ಸ್, ತೋಟದ ಮನೆಗಳಲ್ಲಿ ಅವ್ಯಾಹತವಾಗಿ ಹೆಣ್ಣು ಭ್ರೂಣ ಪತ್ತೆ ಹಾಗೂ ಹತ್ಯೆ ನಡೆದಿರುವುದು ರಾಜ್ಯಾದ್ಯಂತ ಸಂಚಲಕ್ಕೆ ಕಾರಣವಾಗಿತ್ತು. ಪ್ರಕರಣ ಸಂಬಂಧ ಹೆಚ್ಚಿನ ತನಿಖೆ ನಡೆಸಿದ ಪೊಲೀಸರಿಗೆ, ಹೆಣ್ಣು ಭ್ರೂಣ ಹತ್ಯೆಯ ಕಬಂಧಬಾಹು ಮೈಸೂರಿನ ವರೆಗೆ ವಿಸ್ತರಿಸುವುರುವುದು ಗೊತ್ತಾಗಿತ್ತು. ಕೊನೆಯಲ್ಲಿ ಘಟನೆಯ ಕಿಂಗ್‌ಪಿನ್‌ನನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದರು. ಇದೀಗ ಮಂಡ್ಯದಲ್ಲಿ ಬಾಲಗರ್ಭಿಣಿಯರ ಸಂಖ್ಯೆ ಹೆಚ್ಚಾಗಿದೆ

ಶ್ರೀ ಮೌಕ್ತಿಕಾಂಭ ವಿಜೃಂಭಣೆಯ ಹಸಿಕರಗ ಮಹೋತ್ಸವ

ದೇವನಹಳ್ಳಿ: ಪಟ್ಟಣದ ವಹ್ನಿಕುಲ ಕ್ಷತ್ರಿಯರ (ತಿಗಳರ) ಟ್ರಸ್ಟ್ ವತಿಯಿಂದ ಶ್ರೀ ಮೌಕ್ತಿಕಾಂಭ ತಾಯಿಯ ಹಸಿಕರಗ ಮಹೋತ್ಸವ ಗುರುವಾರ ಬೆಳ್ಳಗ್ಗೆ ವಿಜೃಂಭಣೆಯಿಂದ ನೆರವೇರಿತು.

ಕರಗದ ಪೂಜಾರಿ ಉಮೇಶ್ ಅವರು ಹಸಿಕರಗವನ್ನು ಹೊತ್ತು ಪಟ್ಟಣದ ಪ್ರಮುಖ ವೃತ್ತಗಳಲ್ಲಿ, ತಮಟೆ ವಾದನಗಳು, ಮಂಗಳವಾದ್ಯಗಳ ವಾದನಕ್ಕೆ ತಕ್ಕಂತೆ ನೃತ್ಯ ಮಾಡುತ್ತಾ ರಂಜಿಸಿದರು. ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿದರು.

ದೇವನಹಳ್ಳಿ ಇತಿಹಾಸ ಪ್ರಸಿದ್ಧ ದೇವನಹಳ್ಳಿಯ ಶ್ರೀಮೌಕ್ತಿ ಕಾಂಭ ಅಮ್ಮನವರ ಕರಗ ಮಹೋತ್ಸವವು ಮೇ1 ಶುಕ್ರವಾರದಂದು ಅದ್ದೂರಿಯಾಗಿ ನಡೆಯಲಿದೆ ಎಂದು ಶ್ರೀಮೌಕ್ತಿಕಾಂಭ ವಹ್ನಿಕುಲ ಕ್ಷತ್ರಿಯ ತಿಗಳರ ಸಂಘದ ಅಧ್ಯಕ್ಷ ಎಸ್.ಸಿ. ನಾಗರಾಜ್ ತಿಳಿಸಿದ್ದಾರೆ

ಪಟ್ಟಣದ ಮೌಕ್ತಿಕಾಂಭ ದೇವಾಲಯದ ಆವರಣದಲ್ಲಿ ಮೌಕ್ತಿಕಾಂಬಾ ಕರಗ ಮಹೋತ್ಸವದ ಸಿದ್ಧತೆ ಸಂಬಂಧ ಪಟ್ಟಂತೆ ಸುದ್ದಿಗಾರರೊಂದಿಗೆ ಏಪ್ರಿಲ್ 23ರಿಂದ ರಿಂದ ಮೇ 3 ರವರೆಗೆ ದೇಗುಲದಲ್ಲಿ ವಿಶೇಷ ಪೂಜೆಗಳು ನಡೆಯಲಿವೆ. ಮೇ 1ರಂದು ರಾತ್ರಿ 1 ಗಂಟೆಗೆ ದೇವಾಲಯದಿಂದ ಕರಗ ಪಟ್ಟಣದ ರಾಜಬೀದಿಗಳಲ್ಲಿ ಸಂಚರಿಸಲಿದೆ. ಮೇ 2ರಂದು ಸಂಜೆ 4ಗಂಟೆಗೆ ವಸಂತೋತ್ಸವ ಮತ್ತು ಧ್ವಜಾರೋಹಣ ಹಾಗೂ ಮೇ 3ರಂದು ರಾತ್ರಿ 8 ಗಂಟೆಗೆ ಪಣಸ್ಕರಪೂಜೆಮತ್ತು ಮಹಾಮಂಗಳಾರತಿ,ಇಂದು ಹಸಿಕರಗ ಮಹೋತ್ಸವ ನಡೆಯಿತು ಎ

ಯುವ ಕನ್ನಡಿಗರ ಸೇನೆ ನೆಲ ಜನ ಭಾಷೆಗೆ,ಕಾರ್ಮಿಕರ ಹಿತರಕ್ಷಣೆಗೆ ಮಂಚೂಣಿಯಲ್ಲಿದೆ.- ಡಾ. ಶ್ರೀ ನಿರ್ಮಲಾನಂದ ಮಹಾಸ್ವಾಮೀಜಿ

ಬೆಂಗಳೂರು: ಕರ್ನಾಟಕದಲ್ಲಿ ಕನ್ನಡ ನೆಲ ಜಲ ಭಾಷೆಯ ಸಂರಕ್ಷಣೆಯ ಜೊತೆಗೆ ಕಾರ್ಮಿಕರ ಹಿತರಕ್ಷಣೆಗೆ ಯುವ ಕನ್ನಡಿಗರ ಸೇನೆ ಮಂಚೂಣಿಯಲ್ಲಿದ್ದು ಹೋರಾಟ ನಡೆಸುತ್ತಾ ಬರುತ್ತಿದೆ ಎಂದು ಚುಂಚಶ್ರೀ ಶ್ರೀಡಾ. ನಿರ್ಮಲಾನಂದ ಮಹಾಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ಯುವ ಕನ್ನಡಿಗರ ಸೇನೆ ರಾಜ್ಯಾಧ್ಯಕ್ಷ ನೆ.ಲ.ರಾಮ್ ಪ್ರಸಾದ್ ಗೌಡ ಹಾಗೂ ಸಮಾಜ ಸೇವಕ ಮಲ್ಲೇಶ್ ಗೌಡರ ನೇತೃತ್ವದಲ್ಲಿ ಯಶವಂತಪುರ ಕ್ಷೇತ್ರದ ತಿಗಳರಪಾಳ್ಯ ಮುಖ್ಯರಸ್ತೆಯ ಆಟದ ಮೈದಾನದಲ್ಲಿ ಆದ್ದೂರಿಯಾಗಿ ಆಯೋಜಿಸಲಾಗಿದ್ದ ಕಾರ್ಮಿಕ ಸಮಾವೇಶವನ್ನು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಶ್ರೀ ನಿರ್ಮಲಾನಂದಮಹಾಸ್ವಾಮೀಜಿ ಹಾಗೂ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ, ಯಶವಂತಪುರ ಶಾಸಕ ಎಸ್ ಟಿ ಸೋಮಶೇಖರ್ ರವರು ಭಾಗವಹಿಸಿ ಉದ್ಘಾಟಿಸಿದರು.

ದೊಡ್ಡ ಸಾಧನೆಗಳು ಹೆಚ್ಚಿನ ಶ್ರಮವಿಲ್ಲದ ಸಾಧ್ಯವಿಲ್ಲ.ಈ ಜಗತ್ತು ಉದ್ಧಾರವಾಗಬೇಕಾದರೆ ಉದ್ಯಾತ್ತ ಚಿಂತನೆಗಳು ಇಲ್ಲದಿದ್ದರೆ ಸಾಧ್ಯವಿಲ್ಲವಾಗುತ್ತಿಲ್ಲ,ಹಾಗೇ ಉತ್ತಮ ಕೆಲಸಗಾರರು ಇಲ್ಲದಿದ್ದರೆ ಸಾಧ್ಯವಾಗಲ್ಲ. ಯಾವ ಕೆಲಸವೂ ಮೇಲಲ್ಲ ಕೀಳಲ್ಲ ಎಲ್ಲಾ ಕೆಲಸವೂ ಯೋಗ್ಯವೇ ನನ್ನನ್ನು ಸೇರಿದಂತೆ ಪ್ರತಿಯೊಬ್ಬ ವ್ಯಕ್ತಿಯೂ ಕಾರ್ಮಿಕನೇ ಎಂದರು.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಮಾತನಾಡಿ ಗಾರ್ಮೆಂಟ್ಸ್‌ಗಳಲ್ಲಿ ಮಹಿಳೆಯರ ಹೆಣ್ಣುಮಕ್ಕಳ ರಕ್ಷಣೆಗಾಗಿ ಅಂತರಿಕ ದೂರು ಸಮಿತಿ ಕಡ್ಡಾಯವಾಗಿ ಇರಬೇಕಿದೆ ಇಲ್ಲದಿದ್ದರೆ ಪ್ರಶ್ನೆಮಾಡಿ ನಿಮ್ಮ ಹಕ್ಕುಗಳನ್ನು ಪಡೆದುಕೊಳ್ಳಿ ಹಾಗೇ ಸರ್ಕಾರದಿಂದ ವಿಧವೆ ಹಾಗೂ ಗಂಡನಿಂದ ತಿರಸ್ಕಾರಕ್ಕೆ ಗುರಿಯಾದ ತಾಯಂದಿರ 18 ವರ್ಷದ ಒಳಗಿನ ಹೆಣ್ಣು ಮಕ್ಕಳಿಗೆ ಪ್ರಾಯೋಜಕತ್ವ ಎಂಬ ಯೋಜನೆ ಜಾರಿಯಲ್ಲಿದೆ ಅದರ ಸೌಲಭ್ಯ ಪಡೆದುಕೊಳ್ಳಿ ಎಂದರು.

ಇದೇ ವೇಳೆ ಉಚಿತ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರ ಹಾಗೂ ಹೆಲ್ತ್ ಕಾರ್ಡ್ ,ಕಾರ್ಮಿಕರ ದಿನಾಚರಣೆ ಅಂಗವಾಗಿ ನಗರದಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ನೂರಾರು ಪೌರಕಾರ್ಮಿಕರು ಹಾಗೂ ಆಟೋಚಾಲಕರಿಗೆ ಉಡುಗೊರೆ ಹಾಗೂ ಹಲವರಿಗೆ ಕಾರ್ಮಿಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ರಾಜ್ಯಾಧ್ಯಕ್ಷ ನೆ.ಲ.ರಾಮ್ ಪ್ರಸಾದ್ ಗೌಡ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ. ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ, ಸುಜ್ಞಾನ ಮೂರ್ತಿ,ಅಂದ್ರಹಳ್ಳಿ ಬಿಜೆಪಿ ವಾರ್ಡ ಅಧ್ಯಕ್ಷ ,ಸಮಾಜಸೇವಕ ಮಂಡ್ಯ ಮಲ್ಲೇಶ್ ಗೌಡ,ಪೀಣ್ಯ ಕೈಗಾರಿಕಾ ಸಂಘ ಅಧ್ಯಕ್ಷ ಡಿಪಿ ದಾನಪ್ಪ ಹೇರೋಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾಗರಾಜ್, ಲಗ್ಗೆರೆ ಮಂಜುಳಾ ನಾರಾಯಣಸ್ವಾಮಿ, ದೊಡ್ಡ ಬಿದರಕಲ್ಲು ವಾರ್ಡ ಅಧ್ಯಕ್ಷ ಸತೀಶ್ ಗೌಡ,ದೀಪು ಗೌಡ ಅರುಣ್ ಗೌಡ್ರು ,ದೀಪು ಗೌಡ ಅರುಣ್ ಗೌಡ್ರು ,ಹಾಗೂ ಸಂಘದ ಪದಾಧಿಕಾರಿಗಳು ಮಹಿಳಾ ಮುಖಂಡರು, ಸಾವಿರಾರು ಸಂಖ್ಯೆಯಲ್ಲಿ ಆಟೋಚಾಲಕರು,ಗಾರ್ಮೆಂಟ್ಸ್ ನೌಕರರು ಇದ್ದರು

ನಿಧಿ ಆಸೆಗಾಗಿ ತಾಯಿಯನ್ನೇ ಬಲಿ ಕೊಡಲು ಯತ್ನಿಸಿದ ಪುತ್ರ!



ಚಾಮರಾಜನಗರ: ಹಣದ ಆಸೆ ಮತ್ತು ಮೂಢನಂಬಿಕೆಯ ಅಂಧಕಾರದಲ್ಲಿ ಮಾನವೀಯತೆ ಕಳೆದುಕೊಂಡ ಹೃದಯಕಲಕುವ ಘಟನೆ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಗ್ರಾಮವೊಂದರಲ್ಲಿ ಬೆಳಕಿಗೆ ಬಂದಿದೆ. ತನ್ನನ್ನೇ ಹೆತ್ತು ಬೆಳೆಸಿದ ತಾಯಿಯನ್ನೇ ಬಲಿ ಕೊಡಲು ಮುಂದಾದ ಮಗನ ಕೃತ್ಯ ಗ್ರಾಮಸ್ಥರನ್ನು ಬೆಚ್ಚಿಬೀಳಿಸಿದೆ.

ಈ ಭೀಕರ ಘಟನೆಯಲ್ಲಿ ಆರೋಪಿಯಾಗಿರುವ ವ್ಯಕ್ತಿ ಕೊಂಡಯ್ಯನ ಮಾದಶೆಟ್ಟಿ ಎಂದು ಗುರುತಿಸಲಾಗಿದೆ. ಕೆಲಕಾಲದಿಂದಲೇ ತನ್ನ ಮನೆಯಲ್ಲೇ ಗುಪ್ತನಿಧಿ ಅಡಗಿದೆ ಎಂಬ ಭ್ರಮೆಯಲ್ಲಿ ಬದುಕುತ್ತಿದ್ದ ಈತ, ಅದನ್ನು ಪಡೆಯಲು ವಿವಿಧ ರೀತಿಯ ಮೂಢನಂಬಿಕೆಗಳ ಜಾಲದಲ್ಲಿ ಸಿಲುಕಿದ್ದಾನೆ ಎಂದು ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ, ಕೆಲ ಮಾಂತ್ರಿಕರ ಸಂಪರ್ಕಕ್ಕೂ ಈತ ಒಳಗಾಗಿದ್ದಾನೆ ಎಂಬ ಅನುಮಾನ ವ್ಯಕ್ತವಾಗಿದ್ದು, ಅವರ ಸಲಹೆಯ ಮೇರೆಗೆ ಕುಟುಂಬದ ಹಿರಿಯ ಮಹಿಳೆಯನ್ನು ಬಲಿ ನೀಡಿದರೆ ಅಪಾರ ಸಂಪತ್ತು ದೊರೆಯುತ್ತದೆ ಎಂಬ ತಪ್ಪು ನಂಬಿಕೆಗೆ ಒಳಗಾಗಿದ್ದಾನೆ ಎನ್ನಲಾಗಿದೆ.

ಈ ಮೂಢನಂಬಿಕೆಗೆ ಬಲಿಯಾಗಿ, ತನ್ನ 80 ವರ್ಷದ ತಾಯಿ ಮಾದಮ್ಮಶೆಟ್ಟಿಯನ್ನೇ ಬಲಿಕೊಡಲು ಮಾದಶೆಟ್ಟಿ ಮುಂದಾಗಿದ್ದಾನೆ. ಘಟನೆ ನಡೆದ ದಿನ, ತನ್ನ ಮನೆಯಲ್ಲೇ ಪೂಜೆಯ ಹೆಸರಿನಲ್ಲಿ ವಿಚಿತ್ರ ಹಾಗೂ ಭಯಾನಕ ವಿಧಿವಿಧಾನಗಳನ್ನು ಆರಂಭಿಸಿದ್ದಾನೆ. ಈ ವೇಳೆ ತಾಯಿಯ ಮೇಲೆ ದೈಹಿಕವಾಗಿ ಹಲ್ಲೆ ನಡೆಸುವುದರ ಜೊತೆಗೆ ಮಾನಸಿಕ ಹಿಂಸೆ ನೀಡುತ್ತಿದ್ದಾನೆ ಎಂಬ ಮಾಹಿತಿ ಹೊರಬಂದಿದೆ. ತಾಯಿಯನ್ನು ಬಲಿಕೊಡುವ ಉದ್ದೇಶದಿಂದ ಆವಳನ್ನು ಬಲವಂತವಾಗಿ ಹಿಡಿದುಕೊಂಡು ಕೃತ್ಯಕ್ಕೆ ಮುಂದಾದನೆಂಬ ಆರೋಪವೂ ಕೇಳಬಂದಿದೆ.

ವೃದ್ಧೆ ನೋವಿನಿಂದ ಚೀರಾಡಿದಾಗ ಆ ಶಬ್ದವನ್ನು ಕೇಳಿದ ಗ್ರಾಮಸ್ಥರು ತಕ್ಷಣ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಿದ್ದಾರೆ. ಸಮಯೋಚಿತವಾಗಿ ಮಧ್ಯಪ್ರವೇಶ ಮಾಡಿದ ಗ್ರಾಮಸ್ಥರು, ಮಾದಶೆಟ್ಟಿಯ ಕೃತ್ಯವನ್ನು ತಡೆದು ವೃದ್ಧೆಯ ಜೀವವನ್ನು ಉಳಿಸಿದ್ದಾರೆ. ಗ್ರಾಮಸ್ಥರ ಈ ತ್ವರಿತ ಕ್ರಮವೇ ಒಂದು ದೊಡ್ಡ ಅನಾಹುತವನ್ನು ತಪ್ಪಿಸಿದೆ ಎಂದು ಹೇಳಲಾಗುತ್ತಿದೆ.

ಘಟನೆಯ ಬಗ್ಗೆ ಮಾಹಿತಿ ಸಿಕ್ಕ ತಕ್ಷಣವೇ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತೆಗೆದುಕೊಂಡಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ವೃದ್ಧೆಯನ್ನು ತಕ್ಷಣವೇ ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ವೈದ್ಯರ ಮೇಲ್ವಿಚಾರಣೆಯಲ್ಲಿ ಆಕೆಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಲಾಗುತ್ತಿದೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಯಾದ ಮಾದಶೆಟ್ಟಿಯನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ಈ ಕೃತ್ಯಕ್ಕೆ ಇನ್ನೂ ಯಾರಾದರೂ ಪ್ರೇರೇಪಣೆ ನೀಡಿದ್ದಾರೆಯೇ, ವಿಶೇಷವಾಗಿ ಮಾಂತ್ರಿಕರ ಪಾತ್ರ ಏನು ಎಂಬುದರ ಬಗ್ಗೆ ಆಳವಾದ ತನಿಖೆ ನಡೆಯುತ್ತಿದೆ. ಈ ಘಟನೆ ಕೇವಲ ಕುಟುಂಬ ಮಟ್ಟದಲ್ಲೇ ಸೀಮಿತವಾಗದೇ, ಸಮಾಜದಲ್ಲಿ ಇನ್ನೂ ಮೂಢನಂಬಿಕೆಗಳು ಎಷ್ಟು ಆಳವಾಗಿ ಬೇರೂರಿವೆ ಎಂಬುದನ್ನು ತೋರಿಸುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸ್ ಮೂಲಗಳ ಪ್ರಕಾರ, ಇಂತಹ ಅಂಧನಂಬಿಕೆಗಳನ್ನು ಹರಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸಮಾಜದಲ್ಲಿ ಜಾಗೃತಿ ಮೂಡಿಸುವ ಅಗತ್ಯತೆ ಇದೆ ಎಂಬುದನ್ನೂ ಅವರು ಒತ್ತಿಹೇಳಿದ್ದಾರೆ.

ಒಟ್ಟಿನಲ್ಲಿ, ಹಣದ ಲಾಲಸೆಯು ಹಾಗೂ ಅಂಧನಂಬಿಕೆಗಳು ಒಬ್ಬ ಮಗನಿಂದ ತನ್ನ ತಾಯಿಯ ಮೇಲೆಯೇ ಇಂತಹ ಕ್ರೂರ ಕೃತ್ಯಕ್ಕೆ ಕಾರಣವಾಗಿರುವುದು ಆತಂಕಕಾರಿ ಸಂಗತಿಯಾಗಿದೆ. ಈ ಘಟನೆ ಮಾನವೀಯ ಮೌಲ್ಯಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿದ್ದು, ಸಮಾಜದಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಅಗತ್ಯವನ್ನು ಮತ್ತೊಮ್ಮೆ ಸ್ಥರಿಸಿದೆ.

ಬೆಸ್ಕಾಂ ಗ್ರಾಹಕರಿಗೆ ಮತ್ತೊಂದು ಹೊಡೆತ: ಪ್ರತಿ ಯೂನಿಟ್‌ಗೆ 56 ಪೈಸೆ ಹೆಚ್ಚಳ

ಬೆಂಗಳೂರು: ದಿನನಿತ್ಯ ಬಳಕೆಯ ಅಗತ್ಯ ವಸ್ತುಗಳ ಬೆಲೆ ಏರಿಕೆ ಈಗಾಗಲೇ ಜನಸಾಮಾನ್ಯರ ಜೀವನವನ್ನು ಸಂಕಷ್ಟಕರವಾಗಿಸಿದೆ. ಆಹಾರ ಪದಾರ್ಥಗಳು, ಇಂಧನ, ಸಾರಿಗೆ ಸೇರಿದಂತೆ ಬಹುತೇಕ ಎಲ್ಲ ಕ್ಷೇತ್ರಗಳಲ್ಲೂ ದುಬಾರಿ ಹೊರೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ, ಕುಟುಂಬಗಳ ಮಾಸಿಕ ಬಜೆಟ್‌ಗಳು ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿವೆ. ಇಂತಹ ಆರ್ಥಿಕ ಒತ್ತಡದ ನಡುವೆ, ಇತ್ತೀಚೆಗೆ ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳ ದರ ಏರಿಕೆ ಮತ್ತೊಂದು ಹೊಡೆತ ನೀಡಿದಂತೆಯೇ, ಇದೀಗ ವಿದ್ಯುತ್ ದರ ಏರಿಕೆಯ ರೂಪದಲ್ಲಿ ಹೊಸ ಆಘಾತ ಎದುರಾಗಿದೆ.

ಬೆಂಗಳೂರು ವಿದ್ಯುತ್ ಸರಬರಾಜು ಸಂಸ್ಥೆ BESCOM (ಬೆಸ್ಕಾಂ) ತನ್ನ ವ್ಯಾಪ್ತಿಯಲ್ಲಿರುವ ಗ್ರಾಹಕರಿಗೆ ಪ್ರತಿ ಯೂನಿಟ್ ವಿದ್ಯುತ್‌ಗೆ 56 ಪೈಸೆಯಷ್ಟು ದರವನ್ನು ಹೆಚ್ಚಿಸಿದೆ. ಈ ಹೊಸ ದರಗಳು ಇಂದಿನಿಂದಲೇ ಜಾರಿಗೆ ಬಂದಿದ್ದು, ಇಂದಿನಿಂದ ದಾಖಲಾಗುವ ಮೀಟರ್ ರೀಡಿಂಗ್‌ಗಳಲ್ಲಿ ಈ ಹೆಚ್ಚಿದ ದರವನ್ನು ಲೆಕ್ಕಹಾಕಲಾಗುತ್ತದೆ. ಬೆಂಗಳೂರಿನ ನಗರ ಭಾಗ ಮಾತ್ರವಲ್ಲದೆ ಸುತ್ತಮುತ್ತಲಿನ ಎಂಟು ಜಿಲ್ಲೆಗಳಲ್ಲಿಯೂ ಈ ದರ ಏರಿಕೆ ಅನ್ವಯವಾಗಿದ್ದು, ಲಕ್ಷಾಂತರ ಮನೆಮಠಗಳ ಮೇಲೆ ಇದರ ಪರಿಣಾಮ ತಕ್ಷಣದಿಂದಲೇ ಗೋಚರಿಸಲಿದೆ.

ಸರಾಸರಿ ಗೃಹಬಳಕೆಯ ಗ್ರಾಹಕರಿಗೆ ತಿಂಗಳಿಗೆ 100 ರಿಂದ 150 ರಷ್ಟು ಹೆಚ್ಚುವರಿ ವೆಚ್ಚವಾಗುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ. ಆದರೆ, ಹೆಚ್ಚಿನ ವಿದ್ಯುತ್ ಬಳಕೆಯ ಮನೆಗಳಲ್ಲಿ ಈ ಹೆಚ್ಚಳ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಈಗಾಗಲೇ ಶಾಲಾ ಶುಲ್ಕ, ವೈದ್ಯಕೀಯ ವೆಚ್ಚ, ಇಂಧನ ದರ ಏರಿಕೆ ಮುಂತಾದ ಕಾರಣಗಳಿಂದ ಹಣಕಾಸಿನ ಒತ್ತಡದಲ್ಲಿರುವ ಮಧ್ಯಮ ಹಾಗೂ ಕೆಳಮಧ್ಯಮ ವರ್ಗದ ಕುಟುಂಬಗಳಿಗೆ ಈ ಹೆಚ್ಚುವರಿ ವಿದ್ಯುತ್ ಬಿಲ್ ದೊಡ್ಡ ಸವಾಲಾಗಿ ಪರಿಣಮಿಸಿದೆ.

ಬೆಸ್ಕಾಂ ವ್ಯಾಪ್ತಿಯಲ್ಲಿ ಒಟ್ಟು ಸುಮಾರು 1.2 ಕೋಟಿ ಗ್ರಾಹಕರು ಇದ್ದು, ಇವರಲ್ಲಿ ಬಹುಪಾಲು ಸಾಮಾನ್ಯ ಕುಟುಂಬಗಳೇ ಆಗಿವೆ. ನಗರ ಪ್ರದೇಶಗಳಲ್ಲಿ ಮಾತ್ರವಲ್ಲದೆ ಗ್ರಾಮೀಣ ಮತ್ತು ಅರ್ಧನಗರ ಪ್ರದೇಶಗಳಲ್ಲಿಯೂ ಈ ದರ ಏರಿಕೆಯ ಪರಿಣಾಮ ಕಾಣಿಸಿಕೊಳ್ಳಲಿದೆ. ಕೃಷಿ ಮತ್ತು ಸಣ್ಣ ಉದ್ಯಮಗಳಿಗೂ ಇದು ಪರೋಕ್ಷವಾಗಿ ಹೊಡೆತ ನೀಡುವ ಸಾಧ್ಯತೆ ಇದೆ, ಏಕೆಂದರೆ ವಿದ್ಯುತ್ ವೆಚ್ಚ ಹೆಚ್ಚಾದಂತೆ ಉತ್ಪಾದನಾ ವೆಚ್ಚವೂ ಏರಿಕೆಯಾಗುತ್ತದೆ.

ಈ ದರ ಏರಿಕೆಯ ಪ್ರಮುಖ ಹಿನ್ನೆಲೆ ಎಂದರೆ ಬೆಸ್ಕಾಂ ಎದುರಿಸುತ್ತಿರುವ ಆರ್ಥಿಕ ನಷ್ಟ. ಸುಮಾರು 2,000 ಕೋಟಿ ರೂಪಾಯಿಗಳ ನಷ್ಟವನ್ನು ಸಂಸ್ಥೆ ದಾಖಲಿಸಿದ್ದು, ಈ ನಷ್ಟವನ್ನು ಸರಿಪಡಿಸಲು ದರ ಏರಿಕೆ ಅನಿವಾರ್ಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ Karnataka Electricity Regulatory Commission (ಕೆಇಆರ್‌ಸಿ) ಈ ದರ ಏರಿಕೆಗೆ ಅನುಮೋದನೆ ನೀಡಿದ್ದು, ಅದರ ಹಿಂದೆ ಹಲವು ಕಾರಣಗಳನ್ನು ಸೂಚಿಸಿದೆ. ಆಯೋಗದ ಪ್ರಕಾರ, ವಿದ್ಯುತ್ ಏರಿದಿ ವೆಚ್ಚದಲ್ಲಿ ಉಂಟಾದ ಏರಿಕೆ ಪ್ರಮುಖ ಕಾರಣವಾಗಿದೆ. ರಾಜ್ಯಕ್ಕೆ ಅಗತ್ಯವಿರುವ ವಿದ್ಯುತ್‌ನ್ನು ಹೊರ ರಾಜ್ಯಗಳಿಂದ ಹಾಗೂ ಖಾಸಗಿ ಉತ್ಪಾದಕರಿಂದ ಖರೀದಿಸುವ ಸಂದರ್ಭದಲ್ಲಿ ಹೆಚ್ಚಿದ ದರಗಳನ್ನು ಭರಿಸಬೇಕಾಗುತ್ತದೆ. ಇದಲ್ಲದೆ, ಪ್ರಸರಣ ಮತ್ತು ವಿತರಣೆ ವೇಳೆ ಉಂಟಾಗುವ ನಷ್ಟಗಳು (T&D losses), ಸಿಬ್ಬಂದಿಗಳ ವೇತನ ಹಾಗೂ ನಿರ್ವಹಣಾ ವೆಚ್ಚಗಳು ಕೂಡ ಹೆಚ್ಚಾಗಿವೆ. ಈ ಎಲ್ಲಾ ಅಂಶಗಳು ಒಟ್ಟಾಗಿ ಬೆಸ್ಕಾಂನ ಆರ್ಥಿಕ ಸ್ಥಿತಿಯನ್ನು ದುರ್ಬಲಗೊಳಿಸಿದ್ದರಿಂದ ದರ ಏರಿಕೆ ಅನಿವಾರ್ಯವಾಗಿ ಪರಿಣಮಿಸಿದೆ.

ಇದೇ ವೇಳೆ, ಈ ದರ ಏರಿಕೆಯ ಪರಿಣಾಮವು ಗೃಹಬಳಕೆಯ ಮಟ್ಟದಲ್ಲೇ ಸೀಮಿತವಾಗುವುದಿಲ್ಲ. ವ್ಯಾಪಾರಸ್ಥರು, ಅಂಗಡಿ ಮಾಲೀಕರು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ದೊಡ್ಡ ಕೈಗಾರಿಕಾ ಘಟಕಗಳಿಗೂ ಈ ಹೆಚ್ಚಿದ ವಿದ್ಯುತ್ ದರ ಅನ್ವಯವಾಗಲಿದೆ. ಇದರಿಂದ ಉತ್ಪಾದನಾ ವೆಚ್ಚ ಏರಿಕೆಯಾಗುವುದರಿಂದ, ಉತ್ಪನ್ನಗಳ ಬೆಲೆಗಳಲ್ಲಿ ಸಹಜವಾಗಿಯೇ ಏರಿಕೆ ಸಂಭವಿಸುತ್ತದೆ. ಅಂತಿಮವಾಗಿ, ಈ ಸರಪಳಿಯ ಪರಿಣಾಮವಾಗಿ ಸಾಮಾನ್ಯ ಗ್ರಾಹಕರೇ ಮತ್ತೊಮ್ಮೆ ದುಬಾರಿ ಹೊರೆ ಹೊರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಸ್ಥಳೀಯ ಕರಕುಶಲಗಾರರು, ಸಣ್ಣ ಉದ್ಯಮಿಗಳು ಮತ್ತು ಹೋಟೆಲ್ ಮಾಲೀಕರು ಕೂಡ ಈಗಾಗಲೇ ಆತಂಕ ವ್ಯಕ್ತಪಡಿಸಿದ್ದಾರೆ. "ವಿದ್ಯುತ್ ದರ ಏರಿಕೆ ಎಂದರೆ ನಮ್ಮ ವೆಚ್ಚಗಳು ನೇರವಾಗಿ ಹೆಚ್ಚಾಗುತ್ತವೆ. ಅದನ್ನು ಗ್ರಾಹಕರ ಮೇಲೆ ಹಾಕದೇ ಬೇರೆ ಮಾರ್ಗವಿಲ್ಲ" ಎಂಬ ಅಭಿಪ್ರಾಯವನ್ನು ಹಲವರು ವ್ಯಕ್ತಪಡಿಸುತ್ತಿದ್ದಾರೆ. ಇದು ಸಣ್ಣ ಉದ್ಯಮಗಳ ಲಾಭಾಂಶವನ್ನು ಕುಗ್ಗಿಸುವುದಲ್ಲದೆ, ಕೆಲವು ಕಡೆ ಉದ್ಯೋಗಾವಕಾಶಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ.

ಬೆಸ್ಕಾಂ ಅಧಿಕಾರಿಗಳು ಈ ದರ ಏರಿಕೆಯನ್ನು ಸಮರ್ಥಿಸಿಕೊಂಡು, ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಇದು ಅಗತ್ಯ ಕ್ರಮ ಎಂದು ತಿಳಿಸಿದ್ದಾರೆ. ಜೊತೆಗೆ, ಮುಂದಿನ ದಿನಗಳಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆ ಮತ್ತು ಬಳಕೆಯನ್ನು ಉತ್ತೇಜಿಸಲು ವಿಶೇಷ ಯೋಜನೆಗಳನ್ನು ಜಾರಿಗೆ ತರಲಾಗುವುದು ಎಂದು ಭರವಸೆ ನೀಡಿದ್ದಾರೆ. ಮನೆಮಠಗಳಲ್ಲಿ ರೂಫ್‌ಟಾಪ್ ಸೋಲಾರ್ ವ್ಯವಸ್ಥೆಗಳನ್ನು ಅಳವಡಿಸಲು ಪ್ರೋತ್ಸಾಹ ನೀಡಲಾಗುವುದು, ಶಕ್ತಿ ಉಳಿತಾಯ ಕ್ರಮಗಳನ್ನು ಜಾಗೃತಿ ಮೂಡಿಸುವ ಮೂಲಕ ಬಳಕೆ ಕಡಿಮೆ ಮಾಡಲು ಪ್ರಯತ್ನಿಸಲಾಗುವುದು ಎಂದು ಹೇಳಿದ್ದಾರೆ.

ಆದಾಗ್ಯೂ, ಸಾಮಾನ್ಯ ಜನರ ದೃಷ್ಟಿಯಲ್ಲಿ ಈ ಭರವಸೆಗಳು ತಕ್ಷಣದ ಪರಿಹಾರ ನೀಡುವುದಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಗ್ರಾಹಕರು ತಮ್ಮ ಅಸಮಾಧಾನವನ್ನು ಮುಕ್ತವಾಗಿ ವ್ಯಕ್ತಪಡಿಸುತ್ತಿದ್ದಾರೆ. "ಪ್ರತಿ ಬಾರಿ ದರ ಏರಿಕೆ ಆಗುವಾಗ ಅದರ ಹೊರೆ ನಮ್ಮ ಮೇಲೆಯೇ ಬೀಳುತ್ತದೆ, ಆದರೆ ಆದಾಯದಲ್ಲಿ ಏರಿಕೆ ಕಾಣಿಸುವುದಿಲ್ಲ" ಎಂಬ ಅಸಹಾಯಕ ಭಾವನೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ಕೆಲವರು ಸರ್ಕಾರವು ಜನಸಾಮಾನ್ಯರ ಪರವಾಗಿ ಪರ್ಯಾಯ ಮಾರ್ಗಗಳನ್ನು ಕಂಡುಹಿಡಿಯಬೇಕು ಎಂದು ಆಗ್ರಹಿಸುತ್ತಿದ್ದಾರೆ.

ಈಗಾಗಲೇ ದುಬಾರಿ ಹೊರೆ ಹೊತ್ತಿರುವ ಜನತೆಗೆ ಈ ವಿದ್ಯುತ್ ದರ ಏರಿಕೆ ಮತ್ತೊಂದು ದೊಡ್ಡ ಆರ್ಥಿಕ ಹೊಡೆತವಾಗಿದೆ. ದಿನನಿತ್ಯದ ಬದುಕಿನ ಮೇಲೆ ಇದರ ಪರಿಣಾಮ ಹೆಚ್ಚುತ್ತಿದ್ದು, ಮುಂದಿನ ದಿನಗಳಲ್ಲಿ ಇದರಿಂದ ಉಂಟಾಗುವ ಸರಪಳಿ ಪರಿಣಾಮಗಳು ಇನ್ನಷ್ಟು ವ್ಯಾಪಕವಾಗುವ ಸಾಧ್ಯತೆ ಇದೆ. ಜನಸಾಮಾನ್ಯರ ಬದುಕು ಸುಗಮಗೊಳಿಸುವುದಕ್ಕಿಂತ ಹೆಚ್ಚುವರಿ ಹೊರೆ ಹೆಚ್ಚಿಸುತ್ತಿರುವ ಈ ಪರಿಸ್ಥಿತಿಯಲ್ಲಿ, ಸಮತೋಲನ ಸಾಧಿಸುವುದು ಸರ್ಕಾರ ಮತ್ತು ಸಂಬಂಧಿತ ಸಂಸ್ಥೆಗಳ ಮುಂದೆ ದೊಡ್ಡ ಸವಾಲಾಗ